## ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂ.ಯವರ ನ್ಯಾಯಾಲಯ, ಕುಂದಾಪುರ

**ಸಿ.ಸಿ ನಂಬ್ರ: 667/2025**

ಸರ್ಕಾರದ ಪರ
ಕುಂದಾಪುರ ಗ್ರಾಮಾಂತರ ಠಾಣಾ ಪೊಲೀಸರು. --- ಫಿರ್ಯಾದಿದಾರರು

-ಮತ್ತು-

1. ರಾಜೇಶ ಶೇರುಗಾರ ಹಾಗೂ ಇತರರು, --- ಆರೋಪಿತರು

**:ದೋಷಾರೋಪಣೆ:**

**ಶ್ರೀಮತಿ ಶ್ರುತಿ ಶ್ರೀ ಎಸ್. ಬಿ.ಎ., ಎಲ್ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ,. ಕುಂದಾಪುರ ಆದ ನಾನು ಆರೋಪಿತರಾದ ನಿಮಗೆ ಈ ಮೂಲಕ ಮಾಡುವ ಆಪಾದನೆಯ ಸಾರಾಂಶ ಏನೆಂದರೆ:**

1. ರಾಜೇಶ ಶೇರುಗಾರ, 44 ವರ್ಷ,
ತಂದೆ: ದಿ. ನಾರಾಯಣ ಶೇರುಗಾರ,
ವಾಸ: ಮನೆ ನಂಬ್ರ 1-167, ನಾಗಪ್ಪ ನಿಲಯ,
ಅರಳಿಕಟ್ಟೆ ಉಳ್ಳುರು, ಕಂದಾವರ ಗ್ರಾಮ,
ಕುಂದಾಪುರ ತಾಲೂಕು.

2. ರಾಘವೇಂದ್ರ ಶೇರುಗಾರ, 47 ವರ್ಷ,
ತಂದೆ: ದಿ. ನಾರಾಯಣ ಶೇರುಗಾರ,
ವಾಸ: ಮನೆ ನಂಬ್ರ 1-167, ನಾಗಪ್ಪ ನಿಲಯ,
ಅರಳಿಕಟ್ಟೆ ಉಳ್ಳುರು, ಕಂದಾವರ ಗ್ರಾಮ,
ಕುಂದಾಪುರ ತಾಲೂಕು.

ಕುಂದಾಪುರ ಗ್ರಾಮಾಂತರ ಪೋಲಿಸ್ ಠಾಣಾ ಸರಹದ್ದಿನಲ್ಲಿ, ಆರೋಪಿತರಾದ ನೀವುಗಳು ಜಾಗದ ತಕರಾರಿನ ದ್ವೇಷದಲ್ಲಿ ಹಲ್ಲೆ ಮಾಡುವ ಸಮಾನ ಉದ್ದೇಶದಿಂದ ದಿ. 15.03.2025 ರಂದು ಬೆಳಿಗ್ಗೆ 11.00 ಗಂಟೆಗೆ ಚಾ.ಸಾ.1 ನೆಯವರು ಕಂದಾವರ ಗ್ರಾಮದ ಉಳ್ಳೂರು ಎಂಬಲ್ಲಿ ತಮ್ಮ ಮನೆಯ ಬಳಿ ರಸ್ತೆಯಲ್ಲಿ ನಿಂತು ಬೇಲಿಯಲ್ಲಿರುವ ಆಕೇಶಿಯ ಮರದ ಗೆಲ್ಲು ಕಡಿಯುತ್ತಿರುವಾಗ 1 ನೇ ಆಪಾದಿತ ರಾಜೇಶ್ ಶೇರುಗಾರ ರವರು ಚಾ.ಸಾ.1 ನೇಯವರ ಹಿಂದಿನಿಂದ ಬಂದು ಅವರನ್ನು ಅಡ್ಡಗಟ್ಟಿ ತಡೆದು ನಿಲ್ಲಿಸಿದ್ದು, ಆ ಮೂಲಕ ಆರೋಪಿತರಾದ ನೀವು ಕಲಂ 126(2) ಜೊತೆಗೆ 3(5) ಬಿ.ಎನ್.ಎಸ್. ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

2. ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ 1 ಮತ್ತು 2 ನೇ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಚಾ.ಸಾ.1 ನೇಯವರಿಗೆ ತಳ್ಳಿದ್ದು ಚಾ.ಸಾ.1 ನೇಯವರು ಕವಚಿಬಿದ್ದಿದ್ದು ಹಾಗೂ ಚಾ.ಸಾ.1 ನೇಯವರಿಗೆ ಸೊಂಟಕ್ಕೆ ತುಳಿದು, ಚಾ.ಸಾ.2 ನೇಯವರು ತಪ್ಪಿ ಸಲು ಹೋದಾಗ ತಳ್ಳಿ ಸಾಮಾನ್ಯ ಸ್ವರೂಪದ ನೋವಾಗಲು ಕಾರಣರಾಗಿದ್ದು, ಆ ಮೂಲಕ ಬಿ.ಎನ್.ಎಸ್. ಕಲಂ 115(2) ಜೊತೆಗೆ 3(5) ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

3. ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ 1 ಮತ್ತು 2 ನೇ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಚಾ.ಸಾ.1 ನೇಯವರಿಗೆ ಬೋಳಿಮಗನೆ ನೀನೇನು ಕರೆಂಟ್ ಹಾಕುಲು ತಕರಾರು ಮಾಡುವುದು, ಸೂಳೆಮಗನೆ ನಿನಗೆ ಬಹಳ ಸೊಕ್ಕು ಬಂದಿದೆ ಚಾ.ಸಾ.2, 3, 4 ನೇಯವರು ಹೋಗಿ ಹೊಡೆಯದಂತೆ ತಡೆದಾಗ, ಸೂಳೆಮಗನೆ ಇವತ್ತು ನೀನು ಬಚಾವ್ ಆದಿ, ಚಾ.ಸಾ.2, 3, 4 ನೇಯವರು 2 ನೇ ಆರೋಪಿತರಲ್ಲಿ ಚಾ.ಸಾ.1 ನೇಯವರಿಗೆ ಯಾಕೆ ಹೊಡೆದಿದ್ದು ಎಂದು ವಿಚಾರಿಸಿದಾಗ 2 ನೇ ಆಪಾದಿತನು ಬೇವರ್ಸಿ ಸೂಳೆ ನಿಮ್ಹಾರು ನನಗೆ ಕೇಳೊಕೆ ಎಂದು ಅವಾಚ್ಯ ಶಬ್ದಗಳಿಂದ ಬೈದು ಅವಮಾನ ಮಾಡಿದ್ದು, ಆ ಮೂಲಕ ಬಿ.ಎನ್.ಎಸ್. ಕಲಂ 352 ಜೊತೆಗೆ 3(5) ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

4. ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ 1 ಮತ್ತು 2 ನೇ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ 2 ನೇ ಆರೋಪಿತರಾದ ನೀವು ಚಾ.ಸಾ. 3 ನೇಯವರ ಕೈ ಹಿಡಿದು ಎಳೆದು ಮಾನಕ್ಕೆ ಕುಂದುಂಟು ಮಾಡಿದ್ದು, ಆ ಮೂಲಕ ಬಿ.ಎನ್.ಎಸ್. 74 ಜೊತೆಗೆ 3(5) ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

5. ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ 1 ಮತ್ತು 2 ನೇ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ 2 ನೇ ಆರೋಪಿತರಾದ ನೀವು ಚಾ.ಸಾ. 1 ನೇಯವರನ್ನು ಉದ್ದೇಶಿಸಿ ಹೊಡಿ ಆ ಸೂಳೆಮಗನಿಗೆ ಬಿಡಬೇಡ ಎಂದು ಕುಮ್ಮಕ್ಕು ನೀಡಿದ್ದು, ಆ ಮೂಲಕ ಬಿ.ಎನ್.ಎಸ್. 131 ಜೊತೆಗೆ 3(5) ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

6. ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ 1 ಮತ್ತು 2 ನೇ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ 2 ನೇ ಆರೋಪಿತರಾದ ನೀವು ಚಾ.ಸಾ.2, 3 ಮತ್ತು 4 ನೇಯವರಿಗೆ ಬೇವರ್ಸಿ ಸೂಳೆ ನಿಷ್ಟಾರು ನನಗೆ ಕೇಳೋಕೆ ಎಂದು ಬೈದು ಚಾ.ಸಾ.3 ನೇಯವರ ಕೈ ಹಿಡಿದು ಎಳೆದು ಅವಮಾನ ಮಾಡಿ ಮಾನಕ್ಕೆ ದಕ್ಕೆಯುಂಟು ಮಾಡಿದ್ದು, ಆ ಮೂಲಕ ಬಿ.ಎನ್.ಎಸ್. 131 ಜೊತೆಗೆ 3(5) ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

7. ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ 1 ಮತ್ತು 2 ನೇ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಚಾ.ಸಾ.1 ನೇಯವರಿಗೆ ನಿನ್ನನ್ನು ಕೊಲ್ಲದೆ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿದ್ದು, ಆ ಮೂಲಕ ಬಿ.ಎನ್.ಎಸ್. ಕಲಂ 351(2) ಜೊತೆಗೆ 3(5) ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

(ಸದರಿ ಆರೋಪಗಳ ಕುರಿತಂತೆ ನೀವು ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ )

ದಿ. 05.08.2025

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ನ್ಯಾಯಾಲಯ, ಕುಂದಾಪುರ

**ಸಿ.ಸಿ. ಸಂಖ್ಯೆ: 667/2025**

**ಫಿರ್ಯಾದುದಾರರು:** ಸರಕಾರದ ಪರವಾಗಿ ಕುಂದಾಪುರ ಗ್ರಾಮಾಂತರ ಠಾಣಾ ಪೋಲಿಸರು,

**- ವಿರುದ್ಧ -**

**ಆರೋಪಿ** : **1.** ರಾಜೇಶ ಶೇರುಗಾರ, ತಂದೆ: ದಿ. ನಾರಾಯಣ ಶೇರುಗಾರ,

**1. ನಿಮಗೆ ಓದಿ ಹೇಳಿದ ದೋಷಾರೋಪಣೆಯು ಅರ್ಥವಾಗಿದೆಯೇ ?**

**ಉ.**

**2. ನೀವು ತಪ್ಪನ್ನು ಒಪ್ಪಿಕೊಳ್ಳುತ್ತೀರ ಅಥವಾ ವಿಚಾರಣೆ ಮಾಡ ಬಯಸುವಿರಾ ?**

**ಉ.**

**ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಆರೋಪಿ ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು ಅವು ಸರಿಯಾಗಿರುತ್ತವೆಂದು ಈ ಮೂಲಕ ದೃಢೀಕರಿಸುತ್ತೇನೆ.**

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ಕುಂದಾಪುರ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ನ್ಯಾಯಾಲಯ, ಕುಂದಾಪುರ

**ಸಿ.ಸಿ. ಸಂಖ್ಯೆ: 667/2025**

**ಫಿರ್ಯಾದುದಾರರು:** ಸರಕಾರದ ಪರವಾಗಿ ಕುಂದಾಪುರ ಗ್ರಾಮಾಂತರ ಠಾಣಾ ಪೋಲಿಸರು,

**- ವಿರುದ್ಧ -**

**ಆರೋಪಿ** : **2.** ರಾಘವೇಂದ್ರ ಶೇರುಗಾರ, ತಂದೆ: ದಿ. ನಾರಾಯಣ ಶೇರುಗಾರ,

**1. ನಿಮಗೆ ಓದಿ ಹೇಳಿದ ದೋಷಾರೋಪಣೆಯು ಅರ್ಥವಾಗಿದೆಯೇ ?**

**ಉ.**

**2. ನೀವು ತಪ್ಪನ್ನು ಒಪ್ಪಿಕೊಳ್ಳುತ್ತೀರ ಅಥವಾ ವಿಚಾರಣೆ ಮಾಡ ಬಯಸುವಿರಾ ?**

**ಉ.**

**ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಆರೋಪಿ ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು ಅವು ಸರಿಯಾಗಿರುತ್ತವೆಂದು ಈ ಮೂಲಕ ದೃಢೀಕರಿಸುತ್ತೇನೆ.**

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ಕುಂದಾಪುರ.